**ರೇಷ್ಮೆ ಸೀರೆಯ ಜರಿಯಂಚು ಮತ್ತು ಕಸೂತಿ ಇರುವ ಸೀರೆ ಬಾಳಿಕೆ ಬರಬೇಕಾದರೆ ಜೋಪಾನವಾಗಿ ಸಂರಕ್ಷಿಸಬೇಕು. ಇಲ್ಲವಾದರೆ ದುಬಾರಿ ಬೆಲೆಯ ಸೀರೆ ಬೇಗನೆ ಅಂದಗೆಡಬಹುದು. ಹಾಗಾದರೆ ಇಂಥ ಸೀರೆಗಳ ಸಂರಕ್ಷಣೆ ಹೇಗೆ..?**



# ಕಸೂತಿ ಸೀರೆ ಸಂರಕ್ಷಣೆ ಹೇಗೆ?





ಉಮಾ ಜಯಕುಮಾರ್
ಬ್ಯೂಟಿಶಿಯನ್

ಸೀರೆ ಹಿರಿಯರಿಂದ ಕಿರಿಯ ವಯಸ್ಸಿನವರೆಗೆ ಎಲ್ಲರೂ ಒಪ್ಪುವಂತಹ ಉಡುಪು. ಸೀರೆಯಲ್ಲಿ ರೇಷ್ಮೆ ಸೀರೆ ಮತ್ತು ಕಸೂತಿ ಅಥವಾ ವರ್ಕ್ ಸೀರೆಗಳು ಈಗಿನ ಫ್ಯಾಷನ್. ದುಬಾರಿ ಬೆಲೆಯನ್ನು ಕೊಟ್ಟು ತಂದು ಅದನ್ನು ಸರಿಯಾಗಿ ಸಂರಕ್ಷಿಸದೆ ಇದ್ದರೆ ಆ ಸೀರೆಯ ಸೊಬಗು ಹಾಳಾಗುತ್ತದೆ. ಸೀರೆಯನ್ನು ಹೇಗೆ ಸಂರಕ್ಷಿಸಬೇಕು?

ಸೀರೆಗಳಲ್ಲಿ ರೇಷ್ಮೆ ಸೀರೆಗಳು ಮತ್ತು ಕಸೂತಿ ಅಥವಾ ವರ್ಕ್ ಸೀರೆಗಳನ್ನು ನಾವು ಸಮಾರಂಭಗಳಿಗೆ ಉಟ್ಟು ಕೊಂಡು ಹೋಗಿ ಬಂದ ಮೇಲೆ ಅದನ್ನು ಸರಿಯಾಗಿ ಸಂರಕ್ಷಿಸಿಡಬೇಕು. ಸೀರೆ ಕೊಂಡಾಗ ಅದು ರೇಷ್ಮೆಯಾಗಲಿ ಅಥವಾ ಎಂಬ್ರಾಯಿಡರಿ ಸೀರೆಗಳೇ ಆಗಲಿ ಅದಕ್ಕೆ ಸೀರೆ ಫಾಲ್ಸ್ ಹಾಕಿಸಿ. ಸೀರೆಗೆ ಕುಚ್ಚು ಕಟ್ಟಿಸಿದಾಗ ಅದರ ಅಂದ ಹೆಚ್ಚುತ್ತದೆ. ಫ್ಯಾನ್ಸಿ ಸೀರೆಗಳಿಗೂ ನಾವು ಫಾಲ್ಸ್ ಹಾಕಿ ಸೀರೆಯ ಅಂಚನ್ನು ಹೊಲಿಸಿ ಸೆರಗಿನಲ್ಲಿ ತುಂಬಾ ಕಸೂತಿ ಕೆಲಸ ಇದ್ದಾಗ ಅದು ಹಾಳಾಗದಂತೆ ಅದನ್ನು ಸೀರೆಯ ಬಣ್ಣಕ್ಕೆ ಹೊಂದಿಕೊಳ್ಳುವಂತೆ ನೆಟ್‌ಅನ್ನು ಹೊಲಿಸಿದಾಗ ಸೀರೆಯ ಕಸೂತಿ ಅಥವಾ ಎಂಬ್ರಾಯಿಡರಿ ವರ್ಕ್‌ಗಳು ಹಾಳಾಗುವುದಿಲ್ಲ.

ಸೀರೆಗಳನ್ನು ಬೀರುವಿನಲ್ಲಿ (ಗೋದ್ರೆಜ್) ಹ್ಯಾಂಗರ್‌ನಲ್ಲಿ ನೇತು ಹಾಕಬಾರದು. ಹೀಗೆ ಹಾಕಿದಾಗ ಅದರ ಭಾರಕ್ಕೆ ಸೀರೆಯ ಮಧ್ಯದಲ್ಲಿ ಹರಿಯುವ ಸಾಧ್ಯತೆ ಇದೆ, ಮತ್ತು ಸುಕ್ಕು ಸುಕ್ಕಾಗಿ ಕಾಣುತ್ತದೆ.

ರೇಷ್ಮೆ ಸೀರೆಯನ್ನು ಬಿಳಿಯ ಕಾಟನ್ ಬಟ್ಟೆಯಲ್ಲಿ ಮಡಿಸಿ ನೀಟಾಗಿ ಇಡಬೇಕು. ಸೀರೆಯನ್ನು ಉಪಯೋಗಿಸಿದ ನಂತರ ಅದರಲ್ಲಿ ಧೂಳು ಮತ್ತು ಬೆವರಿನ ವಾಸನೆ ಇರುತ್ತದೆ. ಸಮಾರಂಭ ಮುಗಿಸಿ ಬಂದ ಮೇಲೆ ನಿರ್ಲಕ್ಷಿಸದೆ ಅದನ್ನು ಗಾಳಿಯಲ್ಲಿ ಒಣಗಿಸಬೇಕು. ಹೀಗೆ ಮಾಡಿದರೆ ಮತ್ತೆ ಆ ಸೀರೆಯನ್ನು ಧರಿಸಿದರೂ ಹೊಸದರಂತೆ ಅದರ ಹೊಳಪು ಉಳಿಯುತ್ತದೆ.

ರೇಷ್ಮೆ ಸೀರೆಯನ್ನು ನೇರವಾಗಿ ಇಸ್ತ್ರಿ ಮಾಡಬಾರದು. ಅದರ ಮೇಲೆ ಒಂದು ಬಟ್ಟೆಯನ್ನು ಹಾಕಿ ಮಾಡಬೇಕು. ಹಾಗೆಯೇ ಮಾಡಿದರೆ ಜರಿಯು ಕಪ್ಪಾಗುವ ಸಾಧ್ಯತೆ ಇರುತ್ತದೆ. ಫ್ಯಾನ್ಸಿ ಸೀರೆಗಳನ್ನು ಮತ್ತು ರೇಷ್ಮೆ ಸೀರೆಗಳನ್ನು ಒಳ್ಳೆಯ ಅಂಗಡಿಗಳಲ್ಲಿ ಡ್ರೈವಾಷ್ ಮಾಡಿಸಬೇಕು.

ಸೀರೆಯಲ್ಲಿ ಎಣ್ಣೆಯ ಕಲೆಗಳು ಆದಾಗ ಅದಕ್ಕೆ ಟಾಲ್ಕಂ ಪೌಡರ್ ಹಾಕಿ ಐದು ನಿಮಿಷ ಬಿಟ್ಟಾಗ ಅದರ ಕಲೆಗಳು ಮಾಯವಾಗುತ್ತದೆ.

ಸೀರೆಯನ್ನು ತೊಳೆಯುವಾಗ ಮೃದುವಾದ ಶಾಂಪುವಿನಿಂದ ತೊಳೆಯಬೇಕು. ಒಂದೇ ಸೀರೆಯನ್ನು ನೆನೆಸಬೇಕು, ಹಾಗೂ ಸೀರೆಯನ್ನು ಎತ್ತಿ ಒಗೆಯಬಾರದು. ನೀರನ್ನು ಹಿಂಡದೆ ಹಾಗೆಯೇ ನೆರಳಲ್ಲಿ ಒಣಗಿಸಬೇಕು.

## ಬ್ಲೌಸ್ ಬಗ್ಗೆ ಒಂದಿಷ್ಟು:

ಬ್ಲೌಸನ್ನು ಯಾವತ್ತೂ ನಮ್ಮ ಮೈ ಅಳತೆಗೆ ತಕ್ಕಂತೆ ಹೊಲಿಸಬೇಕು. ನಾವು ದಪ್ಪ ಆಗುತ್ತೇವೆ ಎಂದು ಮೊದಲೇ ಸಡಿಲವಾಗಿ ಅಥವಾ ತುಂಬಾ ಬಿಗಿಯಾಗಿಯೂ ಹೊಲಿಸಬಾರದು. ಬ್ಲೌಸನ್ನು ಹೊಸ ಹೊಸ ಡಿಸೈನ್‌ನಲ್ಲಿ ಹೊಲಿಸಬಹುದು.

ಬ್ಲೌಸ್‌ಗಳಿಗೆ ಬೆವರಿನ ಪ್ಯಾಡನ್ನು ಅಂಟಿಸಬೇಕು. ಇದರಿಂದ ಬೆವರಿನ ಕಲೆಗಳು ಮತ್ತು ವಾಸನೆ ಬರುವುದಿಲ್ಲ. ಇದನ್ನು ಒಂದು ಸಲ ಉಪಯೋಗಿಸಿ ಬಿಸಾಡಬಹುದು. ಮತ್ತು ಬೆವರಿನ ಕಾಟನ್ ಪ್ಯಾಡ್ಸ್ ಸಿಗುತ್ತದೆ ಇದನ್ನು ಒಗೆದು ಮರುಬಳಕೆ ಮಾಡಬಹುದು. ಇದರಿಂದ ಬ್ಲೌಸ್‌ಗಳೂ ದೀರ್ಘಕಾಲ ಬಾಳಿಕೆ ಬರುತ್ತದೆ. ಬ್ಲೌಸ್‌ನಲ್ಲಿ ಯಾವುದೇ ಬೆವರಿನ ಕಲೆಗಳು ಆಗುವುದಿಲ್ಲ.